ಸದಸ್ಯರ ಹೇಳಿಕೆ.

ಶ್ರೀ ರಶೀದ್ ಅಸ್ವಾಭಾವಿಕ ಕೊಲೆ ಪ್ರಕರಣದ ಬಗ್ಗೆ ಉಂಟಾದ ಸಂಶಯಗಳ ಕುರಿತು ವಿವರಣೆ ಮಾಜಿ ಮಂತ್ರಿ ಶ್ರೀ ಆರ್. ಎಲ್. ಜಾಲಪ್ಪನವರಿಂದ

ಶ್ರೀ ಆರ್. ಎಲ್. ಜಾಲಪ್ಪ —ಮಾನ್ಯ ಅಧ್ಯಕ್ಷರೆ, ಜನತಂತ್ರದ ಸರ್ವೋಚ್ಚ ನ್ಯಾಯಾಲಯವಾದ ಶಾಸನ ಸಭೆಯ ಮುಂದೆ ತನ್ಮೂಲಕ ಅಖಂಡ ಕರ್ನಾಟಕ ಜನಸ್ತೋಮಕ್ಕೆ ನನ್ನ ಗೃಹ ಖಾತೆಯ ಸಚಿವ ಸ್ಥಾನದ ರಾಜೀನಾಮೆಯ ಬಗ್ಗೆ ವಿವರಣೆ ಕೊಡುವುದು ನನ್ನ ಕರ್ತವ್ಯ ಹಾಗೂ ಜವಾಬ್ದಾರಿಯೆಂದು ಭಾವಿಸಿ ತಮ್ಮ ಅನುಮತಿ ಕೋರಿ, ಅದನ್ನು ಪಡೆದು ನಿಂತಿದ್ದೇನೆ. ಈಗ ಮಾನ್ಯ ಸದಸ್ಯರ ಸಹಕಾರ ಕೋರುತ್ತೇನೆ.

೧೯೮೭ರ ಆಗಸ್ಟ್ ತಿಂಗಳ ೧೬ ರಂದು ನಡೆಯಿತೆನ್ನಲಾದ ಕೀರಳದ ವಕೀಲ ರಷೀದರ ಅಸ್ವಾಭಾವಿಕ ಮರಣದ ಬಗ್ಗೆ ತನಿಕೆ ನಡೆಸಲು ರಾಷ್ಟ್ರದ ಸಿ. ಬಿ. ಐ. ರವರನ್ನು ನಮ್ಮ ಸರ್ಕಾರ ಕೇಳಿದ್ದು ಈ ಸದನಕ್ಕೆ ನೆನಪಿನಲ್ಲಿದೆ ರಾಷ್ಟ್ರದ ಅತ್ಯುನ್ನತ ತನಿಖಾ ಸಂಸ್ಥೆಯಲ್ಲಿ ಯಾವುದೇ ರಾಜಕೀಯ ಪ್ರಭಾವಕ್ಕೆ ಮಣಿಯದಂತೆ ಅಧಿಕಾರಿಗಳಿದ್ದಾರೆಂದೂ ತನಿಖೆ ನಿಷ್ಪಕ್ಷಪಾತವಾಗಿ ನಡೆಯುತ್ತದೆಂದೂ ನಮ್ಮ ಸರ್ಕಾರದ ದೃಢ ನಂಬಿಕೆಯಾಗಿತ್ತು.

ಸ್ವಾತಂತ್ರ್ಯ ನಂತರದ ೪೦ ವರ್ಷಗಳ ಆಡಳಿತದ ಇತಿಹಾಸದಲ್ಲಿ ಯಾವುದೇ ರಾಜ್ಯಗಳಲ್ಲಿನ ಕಾಂಗ್ರೆಸ್ಸೇತರ ಸರ್ಕಾರಗಳು ತನ್ನ ವಿರುದ್ಧ ಇರುವ ಆಪಾದನೆಗಳನ್ನು ಕೇಂದ್ರದಲ್ಲಿರುವ ಬೇರೆ ಪಕ್ಷದ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿರುವ ಕೇಂದ್ರ ತನಿಖಾ ದಳಕ್ಕೆ ತನಿಖೆಗಾಗಿ ಒಪ್ಪಿಸಿರುವ ಉದಾಹರಣೆಯೇ ಇಲ್ಲ. ಕರ್ನಾಟಕದ ಜನತಾ ಸರ್ಕಾರ ಮೊಟ್ಟ ಮೊದಲಿಗೆ ಇಂಥ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿತು. ಅಲ್ಲದೇ ಕೇಂದ್ರ ಸರ್ಕಾರ ಆಡಳಿತ ನಡೆಸುತ್ತಿರುವ ಪಕ್ಷಕ್ಕೆ ಸೇರಿದ ಇತರ ಯಾವುದೇ ರಾಜ್ಯ ಸರ್ಕಾರಗಳೂ ಇಂಥ ಕ್ರಮಗಳನ್ನು ಕೈಗೊಂಡ ನಿದರ್ಶನವಿಲ್ಲವೆಂದೇ ನನ್ನ ನಂಬಿಕೆ.

ರಷೀದರ ಸಾವು ನಿಗೂಢವಾಗಿದ್ದು ಅವರನ್ನು ಬೆಂಗಳೂರಿಗೆ ಯಾರು ಕರೆದರು ತಂದರು ? ಮತ್ತು ಏಕೆ ? ಜಮಾಪ್ ಎಜುಕೇಷನ್ ಟ್ರಸ್ಟಿಗೂ ಇವರಿಗೂ ಏನು ಸಂಬಂಧ ? ಕೆಲವರು ಹೇಳಿರುವಂತೆ ನ್ಯಾಯಾಲಯದ ತಡೆ ಆಜ್ಞೆ ಜಾರಿ ಮಾಡಲು ಸದಾಶಿವನ್‌ರವರಿಗೆ ಇಲ್ಲಿ ಹಲವಾರು ವಕೀಲರ ನೆರವು ಇದ್ದಾಗ್ಯೂ ಶ್ರೀ ರಷೀದರನ್ನು ಕೇರಳದಿಂದ ಇಲ್ಲಿಗೆ ಕರೆದು ತರುವ ಅವಶ್ಯಕತೆಯಾದರೂ ಏನಿತ್ತು ? ಬೆಂಗಳೂರಿನ ವಕೀಲರ ಸಂಘಕ್ಕೆ ಬರೆದರೆನ್ನಲಾದ ಪತ್ರಕ್ಕೆ ತಾರೀಖೇ ಇರಲಿಲ್ಲ. ಆದರೆ, ವಕೀಲರ ಸಂಘದವರು ಆ ಪತ್ರದ ಮೇಲೆ ೧೭-೮-೮೭ ರಂದು ಸ್ವೀಕೃತವಾಗಿದೆ ಎಂದು ನಮೂದಿಸಿ ತಾವು ತಮ್ಮ ಸದಸ್ಯರಿಗೆ ಆ ಪತ್ರದ ನಕಲನ್ನು ಕಳುಹಿಸಿದಾಗ ಅದರ ಮೇಲೆ ೧೫-೮-೮೭ ಎಂದು ನಮೂದಿಸಿರುವುದರ ಆಂತರ್ಯವೇನು ? ಆ ಪತ್ರದಲ್ಲಿ ಬಳಸಿರುವ ಭಾಷೆ ರಷೀದರದಾಗಿತ್ತೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಕೆಲವು ವಿಷಯಗಳನ್ನು ಏನು ಹೇಳುತ್ತಿದ್ದಾರೆ, ಅದು ಕೋರ್ಟಿನಲ್ಲಿ ಇದೆ.

(ಗೊಂದಲ)

ಅಧ್ಯಕ್ಷರು.—ತಾವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ, ಇಲ್ಲಿ ಉಪನಾಯಕರಾಗಿ ಕೆಲಸ ಮಾಡುತ್ತಿದ್ದೀರಿ ಈಗ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಜಾಲಪ್ಪನವರು ಹೇಳುವುದು ಬಿಟ್ಟರೆ ಬಾಕಿಯವರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಎಲಿಮೆಂಟರಿ ಪ್ರಿನ್ಸಿಪಲ್ ನಿನಗೆ ಹೇಳಿಕೊಡಬೇಕಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನದೂ ಒಂದು ಪಾಯಿಂಟ್ ಆಫ್ ಆರ್ಡರ್ ಇದೆ...

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಇಲ್ಲ.

ಶ್ರೀ ಆರ್ ಎಲ್, ಜಾಲಪ್ಪ.—ಅದಲ್ಲದಿದ್ದರೆ ಅದನ್ನು ಅವರಿಗಾಗಿ ಬರೆದುಕೊಟ್ಟವರಾರು ? ಹಾಗೂ ಆ ಪತ್ರದಲ್ಲಿರುವ ಸಹಿ ರಷೀದರದ್ದೇ ? ಅವರು ಸಾಯುವುದಕ್ಕೆ ಕೆಲವು ದಿನಗಳ ಮೊದಲು ಅವರ ಪತ್ನಿಗೆ ಸ್ವಂತ ಕೈ ಬರಹದಲ್ಲಿ ಬರೆದ ಪತ್ರದಲ್ಲಿ, ಸದಾಶಿವನ್‌ರವರು ಕರ್ನಾಟಕದಲ್ಲಿ ಬಹಳ ಸಂಸ್ಥೆಗಳನ್ನು ಹೊಂದಿದ್ದು, ಬಹಳ ದೊಡ್ಡ ಮನುಷ್ಯರೆಂತಲೂ, ಸದಾಶಿವನ್‌ರವರ ಶಿಕ್ಷಣ ಸಂಸ್ಥೆಗಳನ್ನು ನೋಡಿಕೊಳ್ಳಲು ರಷೀದ್‌ರಿಗೆ ತಿಂಗಳಿಗೆ ಐದು ಸಾವಿರ ರೂಪಾಯಿಗಳ ಸಂಬಳ ಹಾಗೂ ಬಾಡಿಗೆರಹಿತ ವಾಸದ ಮನೆ ಕೊಡುವುದಾಗಿ ವಚನ ಕೊಟ್ಟಿರುವುದಾಗಿಯೂ ಬರೆದಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ, ಇಂತಹ ಭಾವನೆ ಅವರಲ್ಲಿ ಮೂಡಲು ಕಾರಣರಾರು ? ಸದಾಶಿವನ್‌ರವರು ರಷೀದ್‌ರವರೊಬ್ಬರನ್ನೇ ಬೆಂಗಳೂರಿನಲ್ಲಿ ಬಿಟ್ಟು ದೆಹಲಿಗೆ ಹೋಗಿ, ಅಲ್ಲಿ ಪತ್ರಿಕಾ ಗೋಷ್ಠಿ ಮಾಡಿದ್ದರ ರಹಸ್ಯ ವೇನು ? ಅಲ್ಲದೇ ಬೆಂಗಳೂರಿನಿಂದ ಪ್ರಧಾನಿಯವರು ಹಾಗೂ ಇತರ ಅನೇಕರಿಗೆ ತಂತಿಯನ್ನು ಕಳುಹಿಸಿ ಕರ್ನಾಟಕದ ಗೃಹ ಮಂತ್ರಿಗಳೇ ರಷೀದರ ನಾಪತ್ತೆಗೆ ಕಾರಣರೆಂದು ತಿಳಿಸಿರುವ ಶ್ರೀಮತಿ ಅಮೀನಾಬೀ ಯಾರು ?

ಈ ಸಾವಿಗೆ ರಾಜ್ಯದ ಪೋಲೀಸ್‌ನವರೇನಾದರೂ ಕಾರಣವೆಂದಾದರೆ ಅದರ ಉದ್ದಿಶ್ಯವೇನು ? ಅಲ್ಲದೇ ಈ ಎಲ್ಲಾ ವ್ಯವಹಾರದಲ್ಲಿ ಶ್ರೀ ಸದಾಶಿವನ್‌ರವರ ಪಾತ್ರವೇನು ? ಮೇಲ್ಕಂಡ ಎಲ್ಲಾ ಮೂಲಭೂತ ಪ್ರಶ್ನೆಗಳಿಗೆ ಕೇಂದ್ರ ತನಿಖಾ ದಳದಿಂದ ಸಮರ್ಪಕ ಉತ್ತರ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದೆವು. ಆದರೆ ಈ ನಿರೀಕ್ಷೆ ಹುಸಿಯಾಯಿತು.

ಕೇಂದ್ರ ತನಿಖಾ ದಳದವರು ಸಂಮಾರು ೫ ತಿಂಗಳ ನಂತರ ತನಿಖಾಧಿಕಾರಿಗಳನ್ನು ಬದಲಾಯಿಸಿ ಕೆಲವು ಕೇರಳದ ಅಧಿಕಾರಿಗಳನ್ನೇ ತನಿಖಾಧಿಕಾರಿಗಳನ್ನಾಗಿ ನೇಮಿಸಿ ತನಿಖೆಯ ದಿಕ್ಕನ್ನೇ ಬದಲಾಯಿಸಿರುವುದರ ಉದ್ದೇಶವೇನು ? ಆದರಲ್ಲೂ ಕಳೆದ ಮಾರ್ಚ್ ೨೯ ರಿಂದ ಅಂದರೆ, ರಾಜ್ಯ ಸಭೆಯ ಚುನಾವಣೆ ನಡೆದಂದಿನಿಂದ ತನಿಖೆಯ ಸ್ವರೂಪವೇ ಬದಲಾಗಿ, ಈ ಮೊಕದ್ದಮೆಯಲ್ಲಿ ಹೇಗಾದರೂ ಮಾಡಿ ನನ್ನನ್ನು ಸಿಲುಕಿಸಿ, ನನ್ನನ್ನು ರಾಜಕೀಯವಾಗಿ ಅಳಿಸಂವುದರ ಜೊತೆಗೆ ನಮ್ಮ ಜನತಾ ಪಕ್ಷದ ಸರ್ಕಾರವನ್ನು ಪತನಗಿಸಬೇಕೆಂಬ ಕುಟಿಲ ಕಾರಸ್ಥಾನ ಪ್ರಾರಂಭವಾಗಿದೆ. ನಮ್ಮ ಪಕ್ಷದಲ್ಲಿ ತಾತ್ಕಾಲಿಕವಾಗಿ ಮೂಡಿದ್ದ ಗೊಂದಲಮಯ ವಾತಾವರಣವನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳಲು ಹವಣಿಸಿ...

(ಹತ್ತಾರು ಜನ ಸದಸ್ಯರು ಒಟ್ಟಿಗೆ ನಿಂತು ಗಲಾಟೆ ಮಾಡಲು ಪ್ರಾರಂಭಿಸಿದರು)

(ಗೊಂದಲ)

ಅಧ್ಯಕ್ಷರು.—ಯಾರು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ರೂಲಿಂಗ್ ಕೊಟ್ಟಾಯ್ತು ಆಗಿದೆ, ನಥಿಂಗ್ ವಿಲ್‌ಬಿ ರೆಕಾರ್ಡೆಡ್. ಪಾಯಿಂಟ್ ಆಫ್ ಆರ್ಡರ್ ಬಂದಿತ್ತು. ಓದಲು ಆಗುವುದಿಲ್ಲವೆಂದು ಪಾಯಿಂಟ್ ಆಫ್ ಆರ್ಡರ್ ಬಂದಿತ್ತು. ಓದಬಹುದೆಂದು ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಲಿ.—ರೂಲ್ ಸಿಗಿ ಏನು ಆಯಿತು... ?

ಶ್ರೀ ಎಂ. ರಘುಪತಿ.—ಹೇಳಿಕೆ ಮಧ್ಯದಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಅವಕಾಶ ಇಲ್ಲ. ಹೇಳಿಕೆ ಮುಗಿದ ಮೇಲೆ ಮಾಡಬಹುದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸದನವು ಮಾಡಿದಂತಹ ನಿಯಮವನ್ನು ನೀವು ಮುರಿಯುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಭಾನಾಯಕರು ಹೇಳಲಿ...

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ.....

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪಾಯಿಂಟ್ ಆಫ್ ಆರ್ಡರ್ ಎತ್ತಲು ಆಗುವುದಿಲ್ಲ ಎಂದರೆ ಏನು ಅರ್ಥ? ಯಾವ ರೂಲ್‌ನ ಮೇಲೆ ತೆಗೆಯಲು ಆಗುವುದಿಲ್ಲ ಅದನ್ನು ದಯವಿಟ್ಟು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ರೂಲ್ ಪ್ರಕಾರ ಪಾಯಿಂಟ್ ಆಫ್ ಆರ್ಡರನ್ನು ಎತ್ತಬೇಕು.

(ಗೊಂದಲ)

SRI M. RAGHUPATHY.—While making a statement, you cannot raise a Point of Order. Please read the rules for your benefit.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಸದನ ಮಾಡಿದಂತಹ ರೂಲನ್ನು ನೀವು ನಿರ್ವಾಹ ಮಾಡುತ್ತಿದ್ದೀರಿ ಅದನ್ನು ಸುಡುತ್ತಾ ಇದ್ದೀರಿ...

೧೨-೫೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಗಾದರೆ ಈ ನಿಯಮಾವಳಿಗಳು ನಿಮಗೆ ಏತಕ್ಕೆ ಬೇಕು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ರೂಲ್ಸ್ ಪುಸ್ತಕ ಬೇಡವೇ?

MR. SPEAKER.—Rule 333 (1) says

> "A point of order shall relate to the interpretation or enforcement of these rules of such articles of the Constitution as regulate the business of the House and shall raise a question which is within the cognizance of the Speaker."

have already permitted him. He will continue his statement.

SRI M. MALLIKARJUNA KHARGE.—Rule 315 says.

> "A member may, with the permission of the Speaker, make a personal explanation although there is no question before the House, but in this case no debatable matter may be brought forward and no debate shall arise"

Now he is raising debatable points.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಪಾಯಿಂಟ್ ಆಫ್ ಆರ್ಡರ್‌ನ್ನೂ ವಿರೋಧ ಪಕ್ಷದ ನಾಯಕಿಯರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಎತ್ತಿದಾಗ ತಾವು ಕುಳಿತುಕೊಳ್ಳಲು ಹೇಳಿದಿರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಕುಳಿತುಕೊಳ್ಳುವುದಕ್ಕೆ ಮುಂಚೆ ಮಾನ್ಯ ಸದಸ್ಯರಾದ ರಘುಪತಿಯವರು ಕುಳಿತುಕೊಳ್ಳಲಿ. ನಾನು ಕುಳಿತುಕೊಂಡರೆ ಹೆದರಿಕೊಂಡು ಕುಳಿತು ಬಿಟ್ಟರು ಎಂದರ್ಥವಲ್ಲ. ನಮಗೂ ಅವರಿಗಿಂತ ಹೆಚ್ಚು ಕೂಗುವುದಕ್ಕೆ ಬರುತ್ತದೆ. ಆದರೆ ನಾನು ಕೂಗುವುದಕ್ಕೆ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ರಘುಪತಿಯವರಾಗಲಿ, ಮಾನ್ಯ ಸಿಂಧ್ಯರವರಾಗಲಿ ವಿರೋಧ ಪಕ್ಷದ ನಾಯಕರನ್ನು ನೋಡಿಕೊಂಡು ಕೂಗಾಡುತ್ತಿಲ್ಲ, ಅವರ ಹಿಂದೆ ಏನಾಗುತ್ತಿದೆ ಎನ್ನುವುದು ಅವರಿಗೆ ಕಾಣುತ್ತಿಲ್ಲ. ಏತಕ್ಕೆಂದರೆ ಅವರಿಗೆ ಹಿಂದೆ ಕಣ್ಣಿಲ್ಲ. ಅದು ಅವರ ತಪ್ಪಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೂ ಹಿಂದೆ ಕಣ್ಣಿಲ್ಲ. ನಿಮಗೂ ಕಾಣುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಯಾರೂ ಕೂಡ ಪಾಯಿಂಟ್ ಆಫ್ ಆರ್ಡರ್ ಎತ್ತಬಾರದು ಎಂದು ಇಲ್ಲ. ಪಾಯಿಂಟ್ ಆಫ್ ಆರ್ಡರ್ ಎತ್ತಬೇಕಾದರೆ ಯಾವ ರೂಲ್ ಕೆಳಗಡೆ ಎತ್ತಿದರು ಎಂಬುದಕ್ಕೆ ವಿವರವನ್ನು ಹೇಳಬೇಕು. ಇದು ಒಂದು ಎರಡನೆಯ ವಿಚಾರವೇನೆಂದರೆ ಹೋದಸಲ ಸೆಷನ್‌ನಲ್ಲಿ ನಮ್ಮ ಎದುರಿಗೆ ಕುಳಿತುಕೊಂಡಿರತಕ್ಕಂಥ ಮಾನ್ಯ ವಿರೋದ ಪಕ್ಷದ ಸದಸ್ಯರು ಮಾನ್ಯ ಜಾಲಪ್ಪನವರು ರಾಜೀನಾಮೆಯನ್ನು ಕೊಡಬೇಕೆಂದು ಬಹಳ ಬಲವಾಗಿ ಕೇಳಿದರು ಅವತ್ತಿನ ದಿವಸ ಯಾವುದೋ ಒಂದು ಗ್ರೌಂಡ್‌ನಲ್ಲಿ ನಾವೇ ಅವರು ಹೇಳುವುದಕ್ಕೆ ಮುಂಚೆ ಸಿ ಬಿ ಐ.ಗೆ ರೆಫರ್ ಮಾಡುತ್ತೇವೆಂದು ಹೇಳಿದರೆ. ಅದು ತಪ್ಪೋ ಒಳ್ಳೆಯದೋ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಸೌಜನ್ಯವೆಂದರೆ ಈ ಮನೆಯಲ್ಲಿ ಯಾರು ರಾಜೀನಾಮೆ ಕೊಡಬೇಕೆಂದು ಇರುತ್ತಾರೋ ಅವರಿಗೆ ಏತಕ್ಕೆ ರಾಜೀನಾಮೆಕೊಡುತ್ತಿದ್ದೇನೆ ಎನ್ನುವುದಕ್ಕೆ ಹಕ್ಕು ಇದೆ.

ಎರಡನೆಯದಾಗಿ ಈ ಹೇಳಿಕೆಯನ್ನು ಇದ್ದಕ್ಕಿದ್ದ ಹಾಗೆ ಕೊಡುತ್ತಿಲ್ಲ. ನಮ್ಮ ನಿಯಮಾವಳಿಯ ಕೆಳಗೆ ಹೇಳಿಕೆಯ ಒಂದು ಪ್ರತಿಯನ್ನು ಒಂದು ದಿವಸ ಮೊದಲು ಮಾನ್ಯ ಅಧ್ಯಕ್ಷರಿಗೆ ಕೊಡಬೇಕು. ಆವರು ಅದನ್ನು ನೋಡಿ ಯಾವ ರೀತಿ ತಿದ್ದುಪಡಿಯನ್ನುಮಾಡಬೇಕೋ ಆ ರೀತಿ ತಿದ್ದುಪಡಿಮಾಡಿ ಹೇಳ ತಕ್ಕಂಥದ್ದು ಇರುತ್ತದೆ. ಮಾನ್ಯ ಅಧ್ಯಕ್ಷರು ನೋಡಿ ಒಂದು ತೀರ್ಮಾನವನ್ನು ಕೊಟ್ಟಮೇಲೆ ಅದರ ಬಗ್ಗೆ ಆಕ್ಷೇಪ ಎತ್ತುವುದು ಮಾನ್ಯ ಅಧ್ಯಕ್ಷರ ರೂಲಿಂಗ್‌ನ್ನು ಆಕ್ಷೇಪ ಮಾಡಿದಂತಾಗುತ್ತದೆ. ಈರೀತಿ ಮಾಡಬಾರದು. ಕನಿಷ್ಟ ಒಂದು ಸೌಜನ್ಯತೆಯನ್ನು ಆದರೂ ತೋರಿಸಬೇಕು, ಅವರು ಏತಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಹೇಳಿಕೆ ಕೊಡಲು ಅವಕಾಶವನ್ನು ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ನೀವು ರೂಲ್ಸ್‌ನ್ನು ದಯವಿಟ್ಟು ಕೇಳಿ? ಯಾವುದು ಎಂದರೆ ಹೇಗೆ ತಾವು ಆರು ವರ್ಷಗಳಕಾಲ ಅಧ್ಯಕ್ಷರಾಗಿ ಕೆಲಸಮಾಡಿರುವವರು, ನಾವು ಕೂಡ ಆ ಕಡೆ ಇದ್ದವು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೂಲ್ಸ್‌ನಲ್ಲಿ ಡಿಬೇಟ್ ಮಾಡಬಾರದೆಂದು ಇದೆ. ಬೇಕಾದರೆ ನೋಟೀಸ್ ಮೇಲೆ ಡಿಬೇಟ್ ಮಾಡುತ್ತೇವೆ.

ಅಧ್ಯಕ್ಷರು.—ಅದರ ಮೇಲೆ ಡಿಬೇಟ್‌ಮಾಡಿ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಡಿಬೇಟ್ ಮಾಡಕೂಡದೆಂದು ಹೇಳುವುದು ಸೂಕ್ತವಲ್ಲ.

(ಗೊಂದಲ)

ಅಧ್ಯಕ್ಷರು.—ಸ್ಟೇಟ್‌ಮೆಂಟ್ ಮಾಡಬೇಡಿ ಎಂದು ಹೇಳುವುದು, ಮತ್ತು ಇಂಟರ್‌ಫಿಯರ್ ಮಾಡುವುದು ಸರಿಯಲ್ಲ. ದಯವಿಟ್ಟು ಕುಳಿತು ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವೇನು ಇಲ್ಲಿ ಕಿವಿ ಕಣ್ಣು ಮುಚ್ಚಿಕೊಂಡು ಕುಳಿತು ಕೊಳ್ಳುವುದಕ್ಕೆ ಬಂದಿದ್ದೇವೆಯೇ ?

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ, ಅವರು ಹೇಳಿ ಮುಗಿಯಲಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲ್ ೩೧೫ರ ಕೆಳಗೆ.....

ಅಧ್ಯಕ್ಷರೂ.—ನಾನು ಈಗ ಮಾನ್ಯ ಸದಸ್ಯರಿಗೆ ಹೇಳಿಕೆ ನೀಡುವುದಕ್ಕೆ ಅನುಮತಿ ಕೊಟ್ಟಿದ್ದೇನೆ. ಈ ಸಂದರ್ಭದಲ್ಲಿ ಬೇರೆ ಯಾರಿಗೂ ಅವಕಾಶ ಕೊಡುವುದಿಲ್ಲ. ಒಮ್ಮೆ ನಾನು ರೂಲಿಂಗ್ ಕೊಟ್ಟಿದ್ದೇನೆ ದಯವಿಟ್ಟು ಕುಳಿತುಕೊಳ್ಳಿ. ಮಧ್ಯದಲ್ಲಿ ಯಾರಿಗೂ ಅನುಮತಿ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಾದರೆ ಈ ರೂಲ್ಸ್ ಏತಕ್ಕೆ ಬೇಕು ಎಂದು ನಾವು ಕೇಳಬೇಕಾಗುತ್ತದೆ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ೧೬೭ ಮತ್ತು ರೂಲ್ ೩೧೫ ಬೇರೆ ಬೇರೆ ಇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನು ಬೇರೆ ಬೇರೆ ಇವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ೩೧೫ ಏನು ಹೇಳುತ್ತದೆಂದರೆ,

"ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಒಂದು ವಿಷಯವು ಸದನದ ಮುಂದೆ ಚರ್ಚೆಗೆ ಬಂದಿರದಿದ್ದರೂ ಆ ಬಗ್ಗೆ ತಮ್ಮ ವೈಯಕ್ತಿಕ ವಿವರಣೆಯನ್ನು ನೀಡಬಹುದು. ಆದರೆ ಹಾಗೆ ಮಾಡುವಾಗ ಯಾವುದೇ ಚರ್ಚಾಸ್ಪದ ಅಂಶವನ್ನು ತರತಕ್ಕದ್ದಲ್ಲ ಮತ್ತು ಆ ಬಗ್ಗೆ ಯಾವ ಚರ್ಚೆಗೂ ಅವಕಾಶ ನೀಡತಕ್ಕದ್ದಲ್ಲ"

ಇದು ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡತಕ್ಕ ಮೆಂಬರ್‌ಗೆ ಅನ್ವಯವಾಗತಕ್ಕ ನಿಯಮ ಅದೇ ೧೬೭ನೇ ನಿಯಮ ಬಹಳ ಸ್ಪಷ್ಟವಾಗಿದೆ. ಮಂತ್ರಿಯಾದವರು ರಾಜೀನಾಮೆ ಕೊಟ್ಟಾಗ ಅದರ ಬಗ್ಗೆ ಹೇಳಿಕೆ ನೀಡತಕ್ಕದ್ದು ಬೇರೆ. ಮಂತ್ರಿಗಳು ಸಹ ಸದಸ್ಯರೇ. ಆದರೆ ಸದಸ್ಯರಾಗಿ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದು ಬೇರೆ. ಮಂತ್ರಿಗಳಾಗಿ ರಾಜೀನಾಮೆ ಕೊಟ್ಟಾಗ ತಾವು ಕೊಡತಕ್ಕ ಹೇಳಿಕೆಯನ್ನು ಒಂದು ದಿವಸ ಮೊದಲು ಅಧ್ಯಕ್ಷರಿಗೆ ಕೊಡಬೇಕೆಂದು ಇದೆ, ಆ ಪ್ರಕಾರ ಕೊಟ್ಟಿದ್ದಾರೆ ,ರೂಲ್ ೩೧೫ರ ಪ್ರಕಾರ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಕೇಳಿದಾಗ ಅಧ್ಯಕ್ಷರು ಅಪ್ಪಣೆ ಕೊಡತ್ತಾರೆ. ಅದು ಬೇರೆ ವಿಚಾರ. ಇಲ್ಲಿ ಮಂತ್ರಿಯಾಗಿ ರಾಜೀನಾಮೆ ಕೊಟ್ಟ ಮೇಲೆ ಈ ಮಾನಯ ಮುಂದೆ ವಿವರಣೆ ಕೊಡತಕ್ಕ ಮೂಲಭೂತ ಹಕ್ಕನ್ನು ರೂಲ್ ೧೬೭ರಲ್ಲಿ ಕೊಡಲಾಗಿದೆ. ಆಲ್ಲಿ ಬಹಳ ಎಚ್ಚರಿಕೆ ವಹಿಸಿದ್ದಾರೆ. ಒಂದು ದಿನ ಮೊದಲು ಅಧ್ಯಕ್ಷರಿಗೆ ಕಳುಹಿಸಿಕೊಡಬೇಕು ಎಂದು ಇದೆ. ಹಾಗೆ ಕಳುಹಿಸಿದಾಗ ಅದನ್ನು ಅಧ್ಯಕ್ಷರು ಓದಿ ಅಬ್‌ಜಕ್ಷನ್ ಇದ್ದರೆ ಹೊಡೆದು ಹಾಕತಕ್ಕ ಅಧಿಕಾರ ಅಧ್ಯಕ್ಷರಿಗೆ ಇದೆ, ಅವರು ಹೊಡೆದು ಹಾಕಲಿಲ್ಲವೆಂದರೆ ರೂಲ್ ೧೬೭ರ ಪ್ರಕಾರ ಪೂರ್ಣ ಹೇಳಿಕೆಯನ್ನು ಓದುವುದಕ್ಕೆ ಅವರಿಗೆ ಹಕ್ಕಿದೆ. ಒಂದು ದಿನ ಮೊದಲು ಕೊಡತಕ್ಕ ಉದ್ದೇಶ ಏನೆಂದರೆ ಅಬ್‌ಜಕ್ಷನ್ ಏನಾದರೂ ಇದ್ದರೆ ಅಧ್ಯಕ್ಷರು ಓದಿ ನೋಡಿ ಹೊಡೆದು ಹಾಕಬಹುದು ಎಂದು. ಆ ಅಧಿಕಾರ ಅಧ್ಯಕ್ಷರಿಗೆ ಇದೆ. ಈಗ ಅವರು ಅದನ್ನು ನೋಡಿ ಒಪ್ಪಿಗೆ ಕೊಟ್ಟಿದ್ದಾರೆ ಆದರೆ ವಿರೋಧ ಪಕ್ಷದ ನಾಯಕರು ಹೇಳುತ್ತಾರೆ ಅದನ್ನು ಪ್ರಸ್ತಾಪಿಸುವುದಕ್ಕೆ ಬರುವುದಿಲ್ಲ ಎಂದು. ಅವರು ತಮ್ಮ ಹೇಳಿಕೆಯ ಪ್ರತಿಯನ್ನು ತಮ್ಮ ಕಡೆಯಿಂದ ಕೊಟ್ಟಿದ್ದಾರೆ. ಅದಕ್ಕೆ ಅಧ್ಯಕ್ಷರು ಒಪ್ಪಿಗೆ ಕೊಟ್ಟಿದ್ದಾರೆ. ದಯವಿಟ್ಟು ತಾವು ಅರ್ಥ ಮಾಡಿಕೊಂಡು ಹೇಳಿಕೆ ನೀಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ. ಮಾದೇಗೌಡ.—ತಾವು ಹೇಳಿಕೆಯನ್ನು ಓದಿದ್ದೀರಾ ?

ಅಧ್ಯಕ್ಷರೂ.—ನೀವು ಕುಳಿತುಕೊಳ್ಳಿ. ರೂಲ್ ೩೧೫ ಬೇರೆ, ರೂಲ್ ೧೬೭ ಬೇರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಂದರ್ಭದಲ್ಲಿ ಪ್ರತಿಯೊಬ್ಬ ಸದಸ್ಯರೂ ಬಹಳ ಗಂಭೀರವಾಗಿ ಆಲೋಚಿಸಬೇಕಾಗಿರುತ್ತದೆ. ಮಂತ್ರಿಯಾಗಿ ಕೆಲಸ ಮಾಡಿದವರು ಅಪಾದನೆಗೆ ಒಳಗಾದಾಗ, ರಾಜೀನಾಮೆ ಕೊಟ್ಟಾಗ ಸಂಪೂರ್ಣ ಹೇಳಿಕೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಆ ಒಂದು ಸೌಜನ್ಯವನ್ನು ತೋರಬೇಕು. ಆ ವಿಚಾರದಲ್ಲಿ ಮಾನ್ಯ ಸಭಾಧ್ಯಕ್ಷರಿಗೆ ಹಕ್ಕಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಹೇಳುತ್ತಿರುವುದೇ ಬೇರೆ.

ಅಧ್ಯಕ್ಷರೂ. —ಈಗ ಅವರು ಹೇಳುವುದನ್ನು ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರತಿಯೊಬ್ಬ ಸದಸ್ಯರು ಯೋಚನೆ ಮಾಡಬೇಕೆಂದು ಹೇಳಿರತ್ತಾರೆ. ಆದರೆ ಇವರು ಇಲ್ಲದಿರುವುದನ್ನು ಏತಕ್ಕೆ ಹೇಳಬೇಕು ? ನಾವು ಆ ರೀತಿ ಏನಾದರೂ ಹೇಳಂತ್ತೇವೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಮಗೆ ಸಂಪೂರ್ಣ ಅಧಿಕಾರ ಇದೆ. Only if the member wants to give explanation, ಅಂಥ ಸಂದರ್ಭದಲ್ಲಿ ಮಾತ್ರ ಇದೆ. 179 is different and 315 is different.

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ರೂಲಿನಲ್ಲಿ ಅವರು ಹೇಳಿರುವುದು ನಿಜ, ಆದರಲ್ಲಿ ಏನು ಹೇಳಿದ್ದಾರೆ. ನಾಲ್ಕು ಕಾಲಂ ಇದೆ.

ಅಧ್ಯಕ್ಷರು.—ಓದಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಓದಿದ್ದೇನೆ. ತಾವು ಓದಿ. ಅಡ್ಜರ್ನ್‌ಮೆಂಟ್ ಮೋಷನ್ ಇದ್ದಾಗ ಸ್ಟೇಟ್‌ಮೆಂಟ್ ಮಾಡಬೇಕು ಎಂದು ಹೇಳಿದ್ದಾರೆಯೇ ? ಅದಕ್ಕೂ ಕೂಡ ತಾವು ಪರ್ಮಿಷನ್ ಕೊಟ್ಟಿರಿ. ನಾವು ಬಾಯಿ ಮುಚ್ಚಿಕೊಂಡು ಕುಳಿತುಕೊಂಡೆವು. ಇದರಲ್ಲಿ ಡಿಬೇಟಬಲ್ ಪಾಯಿಂಟ್ಸ್ ಇದೆ. ಅವರು ಯಾರು, ಇವರು ಯಾರು.....

MR SPEAKER.—I request the hon member to lay statement on the table of the House. ಎಂದು ಹೇಳುತ್ತೇನೆ ನೀವು ಈ ರೀತಿ ಇಂಟರ್ ಫಿಯರ್ ಮಾಡಿದರೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾಡಿ. ಅದು ನಿಮ್ಮ ಹಕ್ಕು. ಆದರೆ ನೀವು ನಮ್ಮನ್ನು ಹೆದರಿಸಬಾರದು.

ಅಧ್ಯಕ್ಷರು.—ಹೇಳುವುದು ಅವರ ಹಕ್ಕು. ಕೇಳುವುದು ನಿಮ್ಮ ಹಕ್ಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮ್ಮ ಇಷ್ಟ.....

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತು ಕೊಳ್ಳಿ. Nothing will be recorded. ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕುಳಿತುಕೊಂಡು ಎದ್ದು ಹೋಗುವುದಕ್ಕೆ ನಾವು ಬಂದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಈ ಸದನವನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳಲು ಬರುವುದಿಲ್ಲ

(ಗೊಂದಲ)

MR SPEAKER.—Nothing will be recorded.

SRI M. VEERAPPA MOILY.—Rule 167 is not different, It is circumscribed by 215.

(*Interruption*)

ಅಧ್ಯಕ್ಷರು.—ತಾವು ಓದಿ,

(ಮಾನ್ಯ ಜಾಲಪ್ಪನವರು ಓದಲು ಪ್ರಾರಂಭಿಸುತ್ತಿದ್ದಂತೆಯೇ ಮಂತ್ರಿ ಹಲವಾರು ಸದಸ್ಯರು ಒಟ್ಟಿಗೆ ಎದ್ದು ಮಾತನಾಡುತ್ತಿದ್ದರು).

(ಗೊಂದಲ)

MR SPEAKER.—Nothing will be recorded * * *

* * * Not recarded on ordered by the speaker

SRI M. VEERAPPA MOILY.—I am on a point of order.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್‌ಗೆ ಆಮೇಲೆ ಅವಕಾಶ ಕೊಡುತ್ತೇನೆ. ತಾವು ವಿಂಕ್ಯಾಯ ಮಾಡಿ

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಕೇಂದ್ರ ತನಿಖಾ ದಳದವರನ್ನು ದುರುಪಯೋಗ ಪಡಿಸಿಕೊಳ್ಳಲು ಪ್ರಾರಂಭಿಸಿದರು. ಪ್ರತಿದಿನವೂ ಈ ಬಗ್ಗೆ ಪತ್ರಿಕೆಗಳಲ್ಲಿ ಅಳತೆ ವಿಾರಿದ ಪ್ರಚಾರ ಪಡೆಯುತ್ತಾ. ನಮ್ಮ ಪಕ್ಷದ ಶಾಸಕಾಂಗ ಸಭೆಯ ಹಿಂದಿನ ದಿನ ನಿಷ್ಪಾವಂತರಾದ ಡಿ. ಸಿ. ಪಿ. ಯವರನ್ನು ಬಂಧಿಸಿದರು. ನನ್ನ ಬಂಧನದ ಸನ್ನಾಹವನ್ನು ಮಾಡಿದರು, ಇಡೀ ಬೆಂಗಳೂರಿನಲ್ಲಿ ಬಂಧನವಾಗಿದೆಯೆಂಬ ಸುದ್ದಿಯನ್ನು ಹರಡಿದರು ವಿಧಿಯಿಲ್ಲದೆ ಸ್ನೇಹಿತರ ಸಲಹೆಯ ಮೇಲೆ ನಿರೀಕ್ಷಣಾ ಜಾವಿಾನನ್ನು ಪಡೆಯಲು ಪ್ರಯತ್ನಿಸಬೇಕಾಯಿತು. ಈಗ ಈ ಪ್ರಕರಣ ನ್ಯಾಯಾಲಯದ ವುುಂದೆ ಇದೆ? ಪ್ರತಿದಿನವೂ ಏನೇನು ದೊಂಬರಾಟ ನಡೆಯುತ್ತಿದೆ ಎನ್ನುವುದು ಸಹ ಕರ್ನಾಟಕದ ಜನತೆಗೆ ಏಕೆ ಇಡೀರಾಷ್ಟ್ರದ ಜನತೆಗೆ ತಿಳಿದಿದೆ, ಯಾರು ಯಾರನ್ನೋ ತಂದು ನ್ಯಾಯಾಲಯದ ವುುಂದೆ ನಿಲ್ಲಿಸುತ್ತಿದ್ದಾರೆ. ಇನ್ನೂ ಎಷ್ಟು ದಿನ ಇದು ನಡೆಯುವುದೋ ಕಾದು ನೋಡಬೇಕು. ಪ್ರತಿ ಪಕ್ಷದವರಾದ ಕಾಂಗ್ರೆಸ್ ಸ್ನೇಹಿತರಿಂದ ಪ್ರತಿದಿನವೂ ನನ್ನ ರಾಜೀನಾಮೆಗೆ ಒತ್ತಾಯ ಬರುತ್ತಿತ್ತು. ಸಂಸತ್ತಿನಲ್ಲಿ ನನ್ನನ್ನು ಬಂಧಿಸಲು ದಿನವೂ ಆಗ್ರಹ ಪಡಿಸಿದರು. ಇವೆಲ್ಲವನ್ನು ನೋಡಿದಾಗ ನನ್ನ ಬಂಧನಕ್ಕೆ ವ್ಯವಸ್ಥಿತವಾದ ಸಂಚು ನಡೆಯುತ್ತಿದೆ ಎಂಬುದು ಸ್ಪಷ್ಟ.

ಈ ವುೂಲಕ ನಮ್ಮ ಸರ್ಕಾರದ ಪತನಕ್ಕೆ ಪ್ರಯತ್ನ ನಡೆದಿದೆ.

ಕಡೆಯದಾಗಿ ಈ ಸಭೆಯ ವುುಂದೆ ನನ್ನ ಒಂದು ವಿನ್ನಹ. ನಾನು ಕಳೆದ ವೂರು ದಶಕಕ್ಕೂ ವೇಲ್ಪಟ್ಟು, ಸಾರ್ವಜನಿಕ ಜೀವನದಲ್ಲಿದ್ದೇನೆ. ಹಲವಾರು ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೇನೆ. ಎಲ್ಲಿಯೂ, ಯಾರನ್ನೂ ಹಿಂಸಿಸಿದ ದೂರುಗಳು ನನ್ನ ವೇಲಿಲ್ಲ. ನನ್ನ ಐದು ವರ್ಷಗಳ ವುಂತ್ರಿ ಪದವಿಯ ಅವಧಿಯಲ್ಲಿಯೂ ನಾನು ಯಾರನ್ನೂ ಹಿಂಸಿಸಿಲ್ಲ. ನನ್ನ ಸ್ವಾರ್ಥಕ್ಕಾಗಿ ಯಾರನ್ನಾಗಲೀ, ನನ್ನ, ಅಧಿಕಾರವನ್ನಾಗಲೀ ಉಪಯೋಗಿಸಿಕೊಂಡಿಲ್ಲ. ಕಳೆದ ಒಂದು ವರ್ಷದಲ್ಲಿ ಗೃಹ ವುಂತ್ರಿಯಾಗಿದ್ದಾಗಲೂ ಕಾಯಾ ವಾಚಾ ವುನಸಾ ಆತ್ಮ ಸಾಕ್ಷಿಗೆ ಅನುಗುಣವಾಗಿ ಎಲ್ಲಾ ಪಕ್ಷದವರೆನ್ನು ವತ್ತು ಸಾರ್ವಜನಿಕರನ್ನು ಸವುನಾಗಿ ನೋಡಿದ್ದೇನೆ. ನನ್ನ ಸ್ವಾರ್ಥ ಸಾಧನೆಗಾಗಲೀ ನನ್ನ ರಾಜಕೀಯಕ್ಕಾಗಲೀ ಪೋಲೀಸ್ ಇಲಾಖೆಯನ್ನು ಬಳಸಿಕೊಂಡಿಲ್ಲ. ಈಗ ಕೇಂದ್ರ ತನಿಖಾ ದಳದವರು ವಾಡುತ್ತಿರುವ ಅಪವಾದ ಬಹಳ ಗುರುತರವಾದುದು ವತ್ತು ದುರದೃಷ್ಟಕರವಾದುದು.

ಅಧ್ಯಕ್ಷರೇ ಈ ಘನತೆವೆತ್ತ ಸಭೆಯ ವುುಂದೆ ನಾನು ಪ್ರವುಾಣ ವಾಡಿ ಹೇಳುತ್ತೇನೆ. ನಾನು ಸಂಪೂರ್ಣ ನಿರಪರಾಧಿ. ನನ್ನನ್ನು ಬಂಧಿಸಲಿ ಬಿಡಲಿ, ನನಗೆ ಚಿತ್ರಹಿಂಸೆ ಕೊಡಲಿ ಬಿಡಲಿ, ಸತ್ಯಕ್ಕೆ ಜಯ ದೊರಕಬೇಕು, ಸತ್ಯ ಗೆಲ್ಲಲೇಬೇಕು ಎಂಬ ಆತ್ಮವಿಶ್ವಾಸ ನನಗಿದೆ.

ಗ್ರಾವ್ಯ ಜೀವನದ ಹಿನ್ನೆಲೆಯಲ್ಲಿ ಬೆಳೆದ ನನಗೆ ನಯ ನಾಜೂಕಿನ ವಾತು, ಭಾಷೆ ಗೊತ್ತಿಲ್ಲ. ಆದರೆ ಹೃದಯ ಶ್ರೀವುಂತಿಕೆಯನ್ನು ಉಳಿಸಿಕೊಂಡು ಬಂದಿದ್ದೇನೆ. ನನ್ನ ಬದುಕು ತೆರದಿಟ್ಟ ಪುಸ್ತಕ ಎಲ್ಲರೂ ಓದಬಹುದು. ಆದೇನೇಯಿರಲಿ ಈ ಸದನ ಕೆಲವು ವುೂಲಭೂತ ಸವುಸ್ಯೆಗಳ ಬಗ್ಗೆ ಗವುನ ಹರಿಸುವುದು ಒಳ್ಳೆಯದೆಂದು ಭಾವಿಸಿರುವೆ. ಜನತಂತ್ರದ ವ್ಯವಸ್ಥೆಯಲ್ಲಿ ಈಗ ನಾಗರೀಕ ಸವಾಜ ನಿರ್ಮಿಸಿರುವ ಶಾಪಾಡಿ ಬೆಳೆಸುತ್ತಿರುವ ಪರೀಕ್ಷಿಸಲ್ಪಟ್ಟ. ಕೆಲವು ಸಂಸ್ಥೆಗಳನ್ನು ರಾಜಕೀಯ ದುರುದ್ದೇಶಕ್ಕಾಗಿ ಬಳಸಲು ಪ್ರಾರಂಭಿಸಿದರೆ ಈ ಪತನ ಎಲ್ಲಿಯವರೆಗೆ ಕೊಂಡೊಯ್ಯಬಹುದೆಂದು ನೀವೇ ಊಹಿಸಿ. ಈ ಎಲ್ಲಾ ಸಣ್ಣತನಗಳಿಂದ ದೂರ ಸರಿದು.

ವಾನ್ಯ ಅಧ್ಯಕ್ಷರೇ, ನಾನು ವುಂತ್ರಿಯಾಗಿದ್ದಾಗ ಸದನದಲ್ಲಿ ಹಾಗೂ ಹೊರಗಡೆ ತಾವು ನನಗೆ ಕೆಲಸ ವಾಡಲು ಅಪಾರ ಸಹಕಾರವನ್ನಿತ್ತಿದ್ದೀರಿ. ತವುಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನಮ್ಮ ನಾಯಕರಾದ ಶ್ರೀ ರಾವುಕೃಷ್ಣ ಹೆಗಡೆಯವರಿಗೂ ಹಾಗೂ ನನ್ನ ಸಹೋದ್ಯೋಗಿ ಸಚಿವರಿಗೂ ಸದನದ ವಿಲ್ಲಾ ಗೌರವಾನ್ವಿತ ಸದಸ್ಯರಿಗೂ ಇವರು ನೀಡಿದ ಸಹಕಾರಕ್ಕಾಗಿ ನಾನು ಚಿರಋಣಿಯಾಗಿದ್ದೇನೆ. ಅಲ್ಲದೆ ನನ್ನ ಅಧಿಕಾರದ ಅವಧಿಯಲ್ಲಿ ಅತ್ಯವುೂಲ್ಯ ಸಲಹೆ, ಸಹಕಾರ ನೀಡಿದ ಅಧಿಕಾರಿಗಳಿಗೆ ವತ್ತು ಸಿಬ್ಬಂದಿ ಹಾಗೂ ಕರ್ನಾಟಕದ ಜನಸ್ತೋವುಂಕ್ಕೆ ನನ್ನ ಹೃತ್ಪೂರ್ವಕ ವಂದನೆಗಳನ್ನು ತವ್ಮ ವುೂಲಕ ಅರ್ಪಿಸುತ್ತೇನೆ.

ಮತ್ತೊಮ್ಮೆ ನಾನು ತಮಗೆ ವಂದಿಸಿ ನಾನಂ ನನ್ನ ಈ ಹೇಳಿಕೆಯನ್ನು ಮುಂಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈಗ ಪರದಿಗಳನ್ನು ಒಪ್ಪಿಸುವುದು. ಆಮೇಲೆ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಯಾರು ಯಾರನ್ನು ತಂದು ನ್ಯಾಯಾಲಯದ ಮುಂದೆ ಇಡುತ್ತಿದ್ದಾರೆ,

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದೇನೆ.

ಅಧ್ಯಕ್ಷರು.—ಪಾಯಿಂಟೂ ಇಲ್ಲ ಆರ್ಡರೂ ಇಲ್ಲ, ಏನೂ ಇಲ್ಲ.

(ಗೊಂದಲ)

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಈಗ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕೆ ಬರುವುದಿಲ್ಲ ? ರೂಲ್ಸ್ ಎಲ್ಲಿದೆ ? You are flouting the rules,

ಅಧ್ಯಕ್ಷರು.—ರೂಲ್ಸ್ ಪ್ರಕಾರ ನಿಮ್ಮ ಪಾಯಿಂಟ್ ಆಫ್ ಆರ್ಡರ್ ರೂಲ್ಡ್ ಔಟ್ ಮಾಡಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಬೊಮ್ಮಾಯಿಯವರು ಹೇಳಿದ ಮೇಲೆ ಇವರು ಹೇಳಬಾರದೇ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಕೆಟ್ಟ ಪರಂಪರೆ ಇದು.—ಇದು ಬಹಳ ಅನ್ಯಾಯ. ಸದನದಲ್ಲಿ ಕೆಟ್ಟ ಪರಂಪರೆಗೆ ತಾವು ನಾಂದಿ ಹಾಕುತ್ತಿದ್ದೀರಿ. ರೂಲ್ಸ್‌ನ್ನು ಗಾಳಿಗೆ ತೂರಂತ್ತಿದ್ದೀರಿ.

Mr Speakar.—I have ruled out your point of order.

(ಗೊಂದಲ)

Chairman.—I have allowed the hon. member to read.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದಾರೆ

ಅಧ್ಯಕ್ಷರು.—ಅವರ ಪಾಯಿಂಟ್ ಆಫ್ ಆರ್ಡರನ್ನು ರೂಲ್ಡ್ ಔಟ್ ಮಾಡಿದ್ದೇನೆ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಮ್ಮ ಬಾಯಿಯನ್ನು ಅರ್ಧ ಕಟ್ ಮಾಡಿದ್ದೀರಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಇದೊಂದು ಕೆಟ್ಟ ಸಂಪ್ರದಾಯವನ್ನು ಅಧ್ಯಕ್ಷರಾಗಿ ತಾವು ಮಾಡಿದ್ದೀರಿ. ಇದೊಂದು ಅಕ್ಷಮ್ಯ ಅಪರಾಧ. ನಿಯಮಾವಳಿಗಳ ಬಗ್ಗೆ ಸಂಸತ್ ಪರಂಪರೆಯನ್ನು ಇಲ್ಲಿ ಹಾಳು ಮಾಡಲಾಗಿದೆ ಇಂತಹದೊಂದು ರೆಕಾರ್ಡಿಗೆ ಹೋಗಲಿ. This is the most unfortunate day, darkest day in the history ..let it go on record. (ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ಹೇಳಿಕೆಯನ್ನು ತಾವು ಓದಿದ್ದೀರಾ ಎಂಬುದಾಗಿ ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಸಂಪ್ಮನೆ ನನ್ನನ್ನು ಜೈಲಿಗೆ ಕಳುಹಿಸಬೇಕೆಂದು...ನನ್ನನ್ನು ಹಾಳು ಮಾಡಬೇಕೆಂದು ಕಾಯುತ್ತಿದ್ದಾರೆಂಬುದಕ್ಕೆ ಇದೇ ಸಾಕ್ಷಿ. ಹೇಳುವಂತಹದ್ದನ್ನು ಕೇಳಬೇಕೆಂಬ ಸೌಜನ್ಯ ಕೂಡ ಇವರಿಗೆ ಇಲ್ಲ. ಯಾರ ಮೇಲೆ ಬೇಕಾದರೂ ತಪ್ಪು ಹೊರಿಸಬಹುದು. ಇಂತಹ ವ್ಯವಸ್ಥೆಯಲ್ಲಿ ಕಲುಷಿತ ವಾತಾವರಣದಲ್ಲಿ ನೀವೇನು ಸೇಫ್ ಆಗಿ ಇರುತ್ತಿದ್ದೀರಿ ಎಂಬುದಾಗಿ ತಿಳಿದುಕೊಳ್ಳಬೇಡಿ. ನಿಮ್ಮ ಮೇಲೂ ಇಂತಹ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಗೂಬೆ ಕೂರಿಸಬಹುದು;

(ಗೊಂದಲ)

ಇಂತಹ ವ್ಯವಸ್ಥೆ ಇರುವುದರಿಂದ...

(ಗೊಂದಲ)

ವರದಿಗಳನ್ನೊಪ್ಪಿಸುವುದು

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—(ಅಧ್ಯಕ್ಷರು-ಅಂದಾಜುಗಳ ಸಮಿತಿ)

ಅ) ಸಣ್ಣ ನೀರಾವರಿ ಯೋಜನೆಗಳ ಮೇಲಿನ ಸಮಿತಿಯ ಎಂಟನೆಯ ವರದಿ ಹಾಗೂ

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ ಒಂಭತ್ತನೇ ವರದಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ಶ್ರೀ ಎಚ್. ಟಿ. ಕೃಷ್ಣಪ್ಪ (ಅಧ್ಯಕ್ಷರು, ಹಕ್ಕುಭಾದ್ಯತೆಗಳ ಸಮಿತಿ).—ಶ್ರೀ ರಾಮಕೃಷ್ಣ ಹೆಗಡೆ, ಮುಖ್ಯಮಂತ್ರಿಗಳು ಮತ್ತು ಶ್ರೀ ಎಸ್. ಬಂಗಾರಪ್ಪ ವಿರುದ್ಧ ನೀಡಿದ್ದ ಹಕ್ಕುಚ್ಯುತಿ ಸೂಚನೆಯ ಬಗ್ಗೆ ಸಮಿತಿಯ ನಾಲ್ಕನೇ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಕೆ. ಮಲ್ಲಪ್ಪ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ).—ಹಿಂದುಳಿದ ವರ್ಗಗಳವರಿಗೆ ಸಾರ್ವಜನಿಕ ಉದ್ದಿಮೆಗಳು ಮತ್ತು ಇತರೆ ಸಂಸ್ಥೆಗಳ ಸೇವೆಯಲ್ಲಿ ಇರುವ ನೇಮಕಾತಿಯಲ್ಲಿನ ವಿಾಸಲಾತಿ ಬಗೆಗಿನ ಸಮಿತಿಯ ಎಂಟನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಗಿರಣಿ ರಿಂದ ಲೀಸಾ ಸಕ್ಕರೆಯ ಮೇಲೆ ತೆರಿಗೆಯನ್ನು ವಿಧಿಸಿರುವ ಬಗ್ಗೆ ಬೆಳಗಾಂ ಛೇಂಬರ್ಸ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್‌ನ ಉಪಾಧ್ಯಕ್ಷರು ನೀಡಿರುವ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಲಾಯಿತು.

ಶ್ರೀ ಜಿ ಎಸ್. ಆಚಾರ್.—ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಉಪ್ಪುಂದ ಮತ್ತು ಕಂಬದ ಕೋಣೆ ಮಂಡಲ ಪಂಚಾಯಿತ್‌ಗಳ ವ್ಯಾಪ್ತಿಯಲ್ಲಿರುವ ''ಕೊರ್ಸಿ ಬೀಟ್'' ಎಂಬ ಕಾಡಿಟ್ಟ ಅರಣ್ಯವನ್ನು ಉಳಿಸುವ ಬಗ್ಗೆ ಮನವಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ...

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಲಾಯಿತು.